**AKSHARASURYA**
Peer-Reviewed, Multi Lingual E-Journal
Volume – 02, Issue – 01, January 2023.

# ಶಿಶುನಾಳ ಶರೀಫರ ತತ್ವಪದಗಳ ಭಾಷಿಕ ಅನನ್ಯತೆ

ಡಾ. ರವಿಶಂಕರ ಜಿ.ಕೆ.
ಸಹಾಯಕ ಪ್ರಾಧ್ಯಾಪಕ
ಕನ್ನಡ ವಿಭಾಗ
ಎಸ್.ಡಿ.ಎಮ್. ಕಾಲೇಜು, ಉಜಿರೆ
ravipanaje99@gmail.com

1

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಚನ-ದಾಸ ಸಾಹಿತ್ಯ ಚಳುವಳಿಯ ನಂತರ ಉತ್ತರ ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕದ ಭಾಗಗಳಲ್ಲಿ ನೂರಾರು ತತ್ವಪದಕಾರರು ಕಾಣಿಸಿಕೊಂಡರು. ತಮ್ಮ ವಿಚಾರಗಳನ್ನು ಹಾಡುಗಬ್ಬದಲ್ಲಿ ಅಭಿವ್ಯಕ್ತಿಸಿದ ತತ್ವಪದಕಾರರು ಶಿವ ಮತ್ತು ವಿಷ್ಣುವನ್ನು ಸಮನ್ವಯತೆಯಿಂದ ಕಂಡರು. ಹಾಗಾಗಿ ಕನ್ನಡ ಸಾಹಿತ್ಯದಲ್ಲಿ ತತ್ವಪದ ಸಾಹಿತ್ಯವು ಮೌಲಿಕತೆಯ ದೃಷ್ಟಿಯಿಂದ ವಚನ, ಕೀರ್ತನೆಗಳಷ್ಟೇ ಮಹತ್ವವನ್ನು ಪಡೆಯುತ್ತದೆ. ತತ್ವಪದಕಾರರು ವಚನಕಾರರಿಗಿಂತ ಭಿನ್ನವಾಗಿ ಕನ್ನಡದ ದೇಸಿ ಶಬ್ದ ಸಂಪತ್ತನ್ನು ಬಳಸಿಕೊಂಡರು. ಗುಲ್ಬರ್ಗಾ, ಬಳ್ಳಾರಿ, ಬಿಜಾಪುರ, ಕೋಲಾರ ಮುಂತಾದ ಉತ್ತರ ಕರ್ನಾಟಕದ ಭಾಗದಲ್ಲಿನ ತತ್ವಪದಕಾರರ ತತ್ವಪದಗಳಲ್ಲಿ ಆಯಾ ಪ್ರದೇಶದ ಜನಭಾಷೆಯ ಕಂಪು ಕಾಣಿಸಿಕೊಂಡರೆ, ದ್ವಿಭಾಷಿಕ ಪರಿಸರದ ತತ್ವಪದಕಾರರಲ್ಲಿ ಕನ್ನಡ-ಉರ್ದು, ತೆಲುಗು-ಕನ್ನಡ ಮಿಶ್ರಣದ ರಚನೆಗಳು ಕಾಣಿಸಿಕೊಳ್ಳುತ್ತದೆ.

ಶಿಶುನಾಳ ಶರೀಫರು ಮುಸ್ಲಿಂ ಮನೆಯಲ್ಲಿ ಹುಟ್ಟಿ, ವೀರಶೈವ ಪರಿಸರದಲ್ಲಿ ಬಾಲ್ಯವನ್ನು ಕಳೆದು, ಸನಾತನಿಯ ಗುರುವಿನ ಮಾರ್ಗದರ್ಶನದಿಂದ ಜ್ಞಾನಿಯಾದವರು. ಇಸ್ಲಾಂ, ವೀರಶೈವ ಮತ್ತು ವೈದಿಕ ಮತ ತತ್ವಗಳನ್ನು ಮುಕ್ತವಾಗಿ ಸ್ವೀಕರಿಸಿಕೊಂಡ ಕಾರಣದಿಂದ ಅವರಲ್ಲಿ ಎಲ್ಲ ಧರ್ಮಗಳ ನಂಬಿಕೆ, ತತ್ವ, ಸಿದ್ಧಾಂತಗಳ ಸಮನ್ವಯತೆ ಕಾಣಿಸಿಕೊಳ್ಳುತ್ತದೆ. ಶರೀಫರು ಉರ್ದು ಮನೆಮಾತಿನ ಪರಿಸರದಲ್ಲಿ ಜನಿಸಿ, ಉತ್ತರ ಕರ್ನಾಟಕದ ಗಂಡುಭಾಷೆಯ ವಾತಾವರಣದಲ್ಲಿ ಬೆಳೆದರು. ಹಾಗಾಗಿ ಅವರು ತಮ್ಮ ಪರಸರದಲ್ಲಿ ಪ್ರಚಲಿತದಲ್ಲಿದ್ದ ಭಾಷೆಗಳ ಆಡುರೂಪವನ್ನು ಸಮರ್ಥವಾಗಿ ಬಳಸಿಕೊಂಡು, ತಮ್ಮ ವಿಚಾರಗಳ ಅಭಿವ್ಯಕ್ತಿಗೆ ಸಶಕ್ತ ಭಾಷೆಯೊಂದನ್ನು ರೂಢಿಸಿಕೊಂಡರು. ಸೊಗಸಾದ ದೇಸಿ ಆಡುನುಡಿಯ ಮೂಲಕ, ದಿನನಿತ್ಯದ ಅನುಭವಗಳಿಂದ ರೂಪುಗೊಂಡ ಉಪಮೆ, ರೂಪಕಗಳನ್ನು ಬಳಸಿಕೊಂಡು ಜಾತಿ-ಧರ್ಮಗಳನ್ನು ಮೀರಿದ ತತ್ವವನ್ನು ಅವರು ಉಪದೇಶ ಮಾಡಿದರು. ಭಾಷೆಯ ಸಾಧ್ಯತೆಗಳನ್ನು ಶರೀಫರು ಸಮರ್ಥವಾಗಿ ಬಳಸಿಕೊಂಡ ಕಾರಣದಿಂದಲೇ ಅವರು ಉಳಿದ ತತ್ವಪದಕಾರರಿಗಿಂತ ಹೆಚ್ಚು ಜನಪ್ರಿಯರಾದರು.

ಶರೀಫರ ಪದಗಳಲ್ಲಿ ಬಹುಸೂಕ್ಷ್ಮ ವಿವರಣೆಗಳು, ವರ್ಣನೆಗಳಿದ್ದು ಕಾವ್ಯಾತ್ಮಕ ಅಭಿವ್ಯಕ್ತಿಯ ಕಡೆಗೆ ಸದಾ ತುಡಿಯುತ್ತದೆ. ಶರೀಫರು ಬಳಸುವ ರೂಪಕಾತ್ಮಕ ಅಥವಾ ಬೆಡಗಿನ ಭಾಷೆಯಿಂದಾಗಿ ಅವರ ಪದಗಳು ನೇರವಾದ ಒಂದು ಅರ್ಥದ ಜೊತೆಗೆ ಅಂತರಾಳದಲ್ಲಿ ಬೇರೆಯದ್ದೇ ಅರ್ಥಸಾಧ್ಯತೆಗಳನ್ನು ಹಿಡಿದಿಟ್ಟುಕೊಂಡಿರುತ್ತದೆ. ಅಲಿಗರಿ ಅಥವಾ ಅನ್ಯೋಕ್ತಿಯ ಮಾದರಿಯಲ್ಲಿರುವ ಶಿಶುನಾಳ ಶರೀಫರ ಕೆಲವು ತತ್ವಪದಗಳನ್ನು ಕುರಿತಾಗಿ ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರು ಹೀಗೆ ಹೇಳುತ್ತಾರೆ- "ಪದ್ಯದ ನಡುವೆ ಯಾವುದೋ ಒಂದು ಸಾಲು ಬೇರೊಂದು ಅರ್ಥಕ್ಕೂ ಹೊರಳಿತೋ ಇದ್ದಕ್ಕಿದ್ದಂತೆ ಇಡೀ ಪದ್ಯವೇ ಸಂಗತಿಯ ನೇರ ವರ್ಣನೆಯಿಂದ ಮತ್ತೊಂದು ಅರ್ಥದ ನೆಲೆಗೆ ಥಟ್ಟನೆ ಹಾರಿಬಿಡುತ್ತದೆ- ನೆಲದ ಮೇಲೆ ಕೆಲದೂರ ಓಡಿದ ವಿಮಾನ ಆ ಬಲವನ್ನೂ ಬಳಸಿ ಆಕಾಶಕ್ಕೆ ಹಾರಿಬಿಡುವಂತೆ. ಹೀಗೆ ಪದ್ಯ ವಾಚ್ಯಾರ್ಥದ ಮೂಲಕ ಮತ್ತೊಂದು ಧ್ವನ್ಯರ್ಥಕ್ಕೂ ತೆರೆದುಬಿಡುತ್ತದೆ. ಶರೀಫರಲ್ಲಿ ವಾಚ್ಯಾರ್ಥವೇ ಸಾಕಷ್ಟು ರೋಚಕವಾಗಿರುತ್ತದೆ; ಧ್ವನ್ಯರ್ಥವಂತೂ ಕೆಲವು ಕಡೆ ಮೈ ಜುಮ್ಮೆನಿಸುವಂತಿರುತ್ತದೆ. ಜೊತೆಗೆ ಅವರು ಬಳಸುವ ಮಾತು, ಅದರ ಹೆಣಿಗೆ, ಧಾಟಿ, ಹೋಲಿಕೆ ಎಲ್ಲ ನಮಗೆ ಆತ್ಮೀಯವಾಗಿರುತ್ತ ದೂರದ ಕಾವ್ಯ ಹತ್ತಿರ ಬಂದು ಕೈಕುಲುಕಿದಂತಾಗುತ್ತದೆ." (ಶಿಶುನಾಳ ಶರೀಫ್ ಸಾಹೇಬರ ಗೀತೆಗಳು ಸಂ.-ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ)

ಶರೀಫರೇ ಹೇಳಿಕೊಳ್ಳುವಂತೆ ಅವರ ಪದವು ಗಣ ಪ್ರಾಸಕೆ ದೊರಕದಂಥಹವು, ಕೇವಲ ಅವುಗಳಲ್ಲಿನ ನುಡಿಶಬ್ದಕೆ ನಿಜ ನಿಲುಕಲಾರದು. ಅವುಗಳು ಗಣನಿಯಮದ ಕಟ್ಟುಪಾಡುಗಳಿಗೆ ಒಳಪಟ್ಟು ತನ್ನ ಗುಣವನ್ನು ಕೆಡಿಸಿಕೊಳ್ಳದೆ, ಲಯ ಪ್ರಳಯದಿಂದ ತಪ್ಪಿಸಿಕೊಂಡು, ನಿಲಯದೊಳಗೆ ನಿಜವನ್ನು ನಿಲ್ಲಿಸುವುದಕ್ಕೆ ಯತ್ನಿಸುತ್ತದೆ.

ಶಿಶುನಾಳ ಶರೀಫರು ಆಧ್ಯಾತ್ಮದ ದೊಡ್ಡ ಸತ್ಯವನ್ನು ಅತ್ಯಂತ ಸರಳ ಮಾತುಗಳಲ್ಲಿ, ಪದಗಳ ಆಟದ ಮೂಲಕವೇ ತೆರೆದಿಟ್ಟವರು.

**ಮನಸೇ ಮನಸಿನ ಮನಸ ನಿಲ್ಲಿಸುವುದು ಮನಸಿನ**
**ಮನ ತಿಳಿಯುವ ಮನ ಬ್ಯಾರೆಲೊ ಮನಸೇ**

ಎನ್ನುವ ಅವರ ನುಡಿ ಉಪನಿಷತ್ತಿನ ವಾಕ್ಯಕ್ಕಿಂತ ಕಡಿಮೆಯಾದುದಲ್ಲ. ಮನುಷ್ಯನ ಎಲ್ಲ ಕ್ರಿಯೆಗಳನ್ನು ವರ್ತನೆಗಳನ್ನು ನಿಯಂತ್ರಿಸುವುದು ಆತನ ಮನಸ್ಸು ಎಂಬುದನ್ನು ಸಾರಿದ್ದ ಶರೀಫರು ಮನಸ್ಸಿನ ಚಂಚಲತೆಯ ಕುರಿತಾಗಿ ಅನೇಕ ಗೀತೆಗಳನ್ನು ರಚಿಸಿದ್ದಾರೆ.

2

ಬೆಡಗಿನಿಂದ ಕೂಡಿರುವ ಶರೀಫರ ರೂಪಕಾತ್ಮಕ ಭಾಷೆಯ ಅಧ್ಯಯನ ಅತ್ಯಂತ ಕುತೂಹಲಕರವಾದುದು. ಪ್ರತಿಮಾ ವಿಧಾನದ ಮೂಲಕ ಅಮೂರ್ತವಾದ ಅನುಭವಗಳಿಗೆ ಮೂರ್ತರೂಪವನ್ನು ಕೊಡುವುದಕ್ಕೆ ಅವರು ಪ್ರಯತ್ನಿಸುತ್ತಾರೆ. ಮನಸ್ಸನ ಚಂಚಲತೆಯನ್ನು, ಮನಸ್ಸಿನಲ್ಲಿರುವ ಕಾಮಕ್ರೋಧಾದಿ ಭಾವಗಳನ್ನು ಕಪಿ, ಹಾವು, ನಾಯಿ, ಹುಚ್ಚು ನಾಯಿ, ಕಪ್ಪೆ, ತಿಗಣೆ ಮುಂತಾದವುಗಳ ಮೂಲಕ ಹೇಳಿರುವ ಸಾಕಷ್ಟು ಉದಾಹರಣೆಗಳು ಶರೀಫರ ಪದಗಳಲ್ಲಿದೆ.

ಹುಚ್ಚುನಾಯಿಯ ರೂಪಕದ ಮೂಲಕ ಹರಿ, ಹರ, ಬ್ರಹ್ಮರಾದಿಯಾಗಿ ಎಲ್ಲರನ್ನೂ ಕಾಡಿದ, ಕಡಿದ ಕಾಮವೆಂಬ ಹುಚ್ಚುನಾಯಿ ಮನಷ್ಯನ ಆಧ್ಯಾತ್ಮದ ಸಾಧನೆಗೆ ತೊಡಕಾಗಿರುವುದನ್ನು ಹೇಳುವ ಅವರ ತತ್ವಪದವು,

**ಹುಚ್ಚುನಾಯಿ ಬಂದು ಕಚ್ಚುತಿಹುದು ತಂಗಿ**
**ಎಚ್ಚರದಲಿ ದಾರಿ ಹಿಡಿದು ನಡೆ**

ಎಂದು ಆರಂಭಿಸಿ ಹುಚ್ಚುನಾಯಿ ಮಾಡುವ ಅವಾಂತರಗಳಗಳನ್ನು ವರ್ಣಿಸುತ್ತಾ, 'ಜೋಕೆ ಲಕ್ಷ್ಮೀಪುರಕ್ಹೋಗುವ ದಾರೀಲಿ ಬೇಕೆಂದಡ್ಡಗಟ್ಟಿ ನೆಗೆವುದಂತೆ' ಎನ್ನುತ್ತಾರೆ. ದೇವರ ಕರುಣೆಯಿಂದ ವಿವೇಕದ ಮನೆಯಲ್ಲಿ ಅಡಗಿ ಆ ಹುಚ್ಚುನಾಯಿಯಿಂದ ಪಾರಾಗಬೇಕೆಂದು ಕರೆನೀಡುತ್ತಾರೆ. ಇವುಗಳೆಲ್ಲವುಗಳಿಂದ ಪಾರಾಗಿ 'ಮಾನಕ್ಕೆ, ದಾನಕ್ಕೆ ಮಣಿಯದೆ ಒಳಗಿನ ಜ್ಞಾನಕ್ಕೆ ಒರೆನಿಂತು ಮನಸ್ಸು ಹರಿಯಬೇಕು' ಎನ್ನುವುದು ಅವರ ನಿಲುವು.

ಕಪಿಗಳ ವರ್ತನೆಯ ಮೂಲಕ ಮನುಷ್ಯನ ಕಾಮವನ್ನು ಹೇಳುವ ಸಾಲುಗಳು ಹೀಗಿದೆ–

**ಮಂಗನ ನೋಡಿದೆ ನಾ– ಅಡಗಿದ**
**ಮಂಗನ ನೋಡಿದೆ ನಾ**

**ಹೆದರಿಕಿಲ್ಲದ ಮಂಗ–ಇದು**
**ಗುದಗೇರಿಯ ಮಂಗ**
**ಮದವೇರಿದ ಮನೆಕದವ ನೂಕುತಿದೆ**

**ಲಕ್ಷ್ಮೀಪುರದ ಮಂಗ–ಇದು**
**ಲಕ್ಷ್ಯ ಇರದ ಮಂಗ**
**ಕುಕ್ಷಿಯ ಕೆಳಗಿನ ಇಕ್ಷುವೆ ತಾನಾದ**

ಶರೀಫರು ಬಳಸಿರುವ ಗುದಗೇರಿ, ಕುಕ್ಷಿಯ ಕೆಳಗಿನ ಇಕ್ಷು ಶಬ್ದಗಳು ಮನುಷ್ಯನಿಗೆ ಕಾಮದ ಮೇಲಿರುವ ಚಂಚಲತೆಯನ್ನು ಸಮರ್ಥವಾಗಿ ಹಿಡಿದಿಟ್ಟುಕೊಳ್ಳುವುದಕ್ಕೆ ಸಾಧ್ಯವಾಗಿದೆ. ಇದಲ್ಲದೆ ಕಪ್ಪೆಗಳ ಜೀವನದ ಮೂಲಕ, ಹಾವಿನ ವರ್ತನೆಯ ಮೂಲಕ ಮನುಷ್ಯನ ಮನಸ್ಸಿನ ಕಾಮದ ಚಂಚಲತೆಯನ್ನು ಶರೀಫರ ಶಕ್ತಿಶಾಲಿಯಾಗಿ ಕಟ್ಟಿಕೊಟ್ಟಿದ್ದಾರೆ.

ಶರೀಫರು ಮಾನವನ ಶರೀರವನ್ನು ಮನೆ, ಶಾಲೆ, ಗುಡಿ, ಗಿರಣಿ ಮುಂತಾದ ಭೌತಿಕ ವಸ್ತುಗಳಲ್ಲಿ, ತಂಬೂರಿಯ ನುಡಿಸುವ ಸೂಕ್ಷ್ಮತೆಯಲ್ಲಿ, ಗದ್ದೆ ಬೇಸಾಯದ ನಾಜೂಕಿನಲ್ಲಿ, ಕೆಸರಿನ ದಾರಿಯಲ್ಲಿ ನಡೆಯುವ ಚಿತ್ರಣದಲ್ಲಿ, ತೇರನು ನಡೆಸುವ ಸಮತೋಲನದ ತೊಳಲಾಟಗಳಲ್ಲಿ ಚಿತ್ರಿಸಿರುವ ಉದಾಹರಣೆಗಳು ದೊರೆಯುತ್ತವೆ. 'ತೇರನೆಳೆಯುತಾರೆ ತಂಗಿ' ಗೀತೆಯಲ್ಲಿ ಬರುವ ಸಾಲು ಹೀಗಿದೆ –

**ನಾಲ್ಕು ಗಾಲಿ ಒಂದೇ ಜೋಡಿ**
**ಆಶಾ ಎಂಬೋ ಹಗ್ಗ ಮಾಡಿ**
**ಹಮ್ಮು ಎಂಬೋ ಕಳಸ ಇಟ್ಟು**
**ಹಾರುವಂಥಾ ಬಾವುಟ ನೆಟ್ಟು**
**ಶಿಶುನಾಳಧೀಶ ದೇವನ**
**ಬೆಸನದಂತೆ ಎಲ್ಲ ಜನರು**

ಜೀವನವೆನ್ನುವ ತೇರು ಚಲಿಸುವ ಚಿತ್ರ ಈ ಗೀತೆಯಲ್ಲಿದೆ. ಆಸೆಯೇ ಮಾನವನ ಜೀವನ ತೇರನ್ನು ಎಳೆಯುವ ಹಗ್ಗ. ಅವನಲ್ಲಿ ಮನೆಮಾಡಿರುವ ಅಹಂಕಾರವೇ ಕಳಸ. ಈ ರಥವನ್ನು ಎಳೆಯುವ ಜನರು ಅಂದರೆ ಅವನ ಸಂಬಂಧಿಕರು. ಇದೆಲ್ಲವೂ ಶಿಶುನಾಳಧೀಶನ ಅಪ್ಪಣೆಯಂತೆ ಬಂದದ್ದು ಎನ್ನುತ್ತಾರೆ ಶರೀಫರು.

ಶರೀಫರು ತಮ್ಮ ತತ್ವಪದಗಳಿಗೆ ರೂಪಕಗಳ ಆಯ್ಕೆಯಲ್ಲಿ ಯಾವುದೇ ಮೇಲು–ಕೀಳು, ಮಡಿ–ಮೈಲಿಗೆಗಳನ್ನು ಇಟ್ಟುಕೊಳ್ಳುವುದಿಲ್ಲ. ಅವರು ಸಾಂಪ್ರದಾಯಿಕತೆಗೆ, ಡಂಬಾಚಾರಗಳಿಗೆ ವಿರುದ್ಧವಾದದ್ದು ಮಾತ್ರವಲ್ಲ ರೂಪಕಗಳಿಗೆ ವಸ್ತುವನ್ನು ಆಯ್ಕೆಮಾಡಿಕೊಳ್ಳುವಲ್ಲಿಯೂ ಆ ಮಡಿವಂತಿಕೆಯನ್ನು ಮುರಿಯುತ್ತಾರೆ. ಉದಾಹರಣೆಗೆ ಕಾಮಕ್ಕೆ ರೂಪಕವಾಗಿ ನಾಯಿ, ಕಪಿ, ಕಪ್ಪೆ ಮುಂತಾದವನ್ನು ಬಳಸಿಕೊಳ್ಳುವ ಜೊತೆ ಜೊತೆಗೆ ಮುಕ್ತಿಯ ಕಡೆಗಿನ ಚಲನೆಯನ್ನು ಕಾಮಿನಿಯ ಸಂಗದ ರೂಪಕದ ಮೂಲಕ, ಸುರತ ಸುಖದ ಮೂಲಕವೂ ಹೇಳುತ್ತಾರೆ. ಅಲ್ಲದೆ ಗುರುಗಳ, ಜ್ಞಾನಿಗಳೊಂದಿಗಿನ ತಮ್ಮ ಒಡನಾಟವನ್ನು ಹೆಣ್ಣೊಬ್ಬಳು ನಡೆಸಿದ ಹಾದರದ ರೂಪಕದ ಮೂಲಕ ಹೇಳಬಲ್ಲ ಚಾಕಚಕ್ಯತೆ ಅವರಲ್ಲಿದೆ.

**ಹಾದರ ಮಾಡಿದೆ ಹಗಳಿರುಳೆನ್ನದೆ**
**ಸಾಧು ಸತ್ಪುರುಷರ ಮೋದದಿ ಕೂಡುತ**
**ಪ್ಯಾಟಿ ಹಳ್ಳೀಲಿ ಕೋಟಿ ಮಂದಿಯ ಕೂಡಿದೆ**
**ದಾಟಿದೆ ಜಾರಿ ಇನ್ನು ಜನ್ಮದ ಕೋಟಲೆ**

ಶರೀಫರು ಆರಾಧನೆಯನ್ನು ಹೊಗೆಬತ್ತಿ ಸೇದುವ ರೂಪಕದ ಮೂಲಕ ಕಟ್ಟಿಕೊಡುತ್ತಾ 'ವಿಷಯ ಸುಖಗಳನ್ನು ಬಿಟ್ಟು, ಲೋಕವ್ಯಸನಕ್ಕೆ ಬೆಂಕಿಯನ್ನು ಕೊಟ್ಟು ದಿವ್ಯ ಸಿದ್ಧ ಜ್ಞಾನದ ಬತ್ತಿ ಸೇದಿ ಬ್ರಹ್ಮಾನಂದದ ಅನುಭವ ಪಡೆಯಬೇಕು' ಎಂಬುದಾಗಿ ಕರೆ ನೀಡುತ್ತಾರೆ.

3

ಶರೀಫರು ಆಧುನಿಕ ವಿಜ್ಞಾನದ ಸಂಗತಿಗಳನ್ನು ಕೂಡ ಪ್ರತಿಮೆಗಳನ್ನಾಗಿಸಿಕೊಂಡಿದ್ದಾರೆ. ಶರೀಫರ ಈ ವೈಶಿಷ್ಟ್ಯ ಬೇರೆ ಯಾವುದೇ ತತ್ವಪದಕಾರರಲ್ಲಿ ಕಾಣಿಸಿಕೊಳ್ಳುವುದಿಲ್ಲ. 'ವೈಜ್ಞಾನಿಕ ಪ್ರತೀಕಗಳ ಮೂಲಕ ಅನುಭಾವದ ಶೋಧ' ಎಂಬುದಾಗಿ ಅದನ್ನು ಡಾ. ಮಹೇಶ ಫ. ಗಾಜಪ್ಪನವರ ಅವರು ಗುರುತಿಸಿದ್ದಾರೆ. (ಧಾರವಾಡ ಜಿಲ್ಲೆಯ ತತ್ವಪದ ಸಾಹಿತ್ಯ–ಡಾ. ಮಹೇಶ ಫ. ಗಾಜಪ್ಪನವರ) 'ಗಿರಣಿ ವಿಸ್ತಾರ ನೋಡಮ್ಮ' ತತ್ವಪದ ಇದಕ್ಕೆ ಸೂಕ್ತ ಉದಾಹರಣೆಯಾಗಬಲ್ಲದು. ಇಡೀ ತತ್ವಪದ ಬಟ್ಟೆಯ

ಗಿರಣಿಯನ್ನು ವರ್ಣಿಸುತ್ತದೆ. ಸೂಕ್ಷ್ಮವಾಗಿ ಗಮನಿಸಿದರೆ ಅನ್ಯೋಕ್ತಿ ತಂತ್ರದ ಮೂಲಕ ಅದು ಮಾನವನ ದೇಹವನ್ನು ವರ್ಣಿಸುತ್ತದೆ ಎಂಬುದು ವೇದ್ಯವಾಗಬಲ್ಲದು–

**ಗಿರಣಿ ವಿಸ್ತಾರ ನೋಡಮ್ಮಾ**
**ಶರಣಿ ಕೂಡಮ್ಮ**

**ಧರಣಿಪತಿಯ ರಾಣಿ**
**ಕರುಣಾಕ ರಾಜ್ಯಕೆ**
**ತರಿಸಿದ ಘನ ಚೋದ್ಯವೋ ಚೀನಾದ ವಿದ್ಯವೋ**

**ಜಲ ಅಗ್ನಿ ವಾಯು ಒಂದಾಗಿ**
**ಕಲೆತು ಚಂದಾಗಿ**
**ಜಲ ಅಗ್ನಿ ವಾಯು ಒಂದಾಗಿ**
**ನೆಲದಿಂದ ಗಗನಕ್ಕೆ ಮುಟ್ಟಿದಂತೆಸುವುದು**
**ಚಲುವ ಚನ್ನಿಗವಾದ ಕಂಭವೋ ಹೊಗಿಯ ಬಿಂಬವೋ**

**ಒಳಗೊಂದು ಬೇರೆ ಆಕಾರ**
**ತಿಳಕೋ ಚಮತ್ಕಾರ**
**ಒಳಗೊಂದು ಬೇರೆ ಆಕಾರ**
**ದಳಗಳೊಂಭತ್ತು ಚಕ್ರ ಸುಳಿವ ಸೂತ್ರಧಾರ**
**ಲಾಳಿ ಮೂರು ಕೋವಿಯೊಳು ಎಳೆತುಂಬುತದರೊಳು**

**ಅಲ್ಲಿ ಬರದಿಟ್ಟರಳಿ ಹಿಂಜಿ**
**ಅಲ್ಲಾದವು ಹಂಜಿ**
**ಅಲ್ಲಿ ಬರದಿಟ್ಟರಳಿ ಹಿಂಜಿ**
**ಗಾಲಿಯೆರಡರ ಮೇಲೆ ಮೂಲಬ್ರಹ್ಮದ ಶೀಲ**
**ನಾಡಿ ಸುಷುಮ್ನನು ಕೂಡಿ ಅಲ್ಲಾಯ್ತೋ ಕುಕ್ಕಡಿ**

**ಪರಮಾನಂದ ಪಟ್ಟೆವೋ ಅಲ್ಲೆ**
**ಮಾರಾಟಕಿಟ್ಟೇವೋ**
**ಪರಮಾನಂದ ಪಟ್ಟೆವೋ**
**ಧರೆಯೊಳು ಶಿಶುನಾಳ ದೇವಾಂಗ ಋಷಿಯಿಂದ**
**ನೇಸಿ ಹಚ್ಚಡ ಹಚ್ಚಿತೋ ಲೋಕ ಮೆಚ್ಚಿತೋ**

ಇಲ್ಲಿ ಶರೀಫರು ಗಿರಣಿ ಮತ್ತು ಅದರ ಹೊಗೆ ಕೊಳವೆಯನ್ನು ದೇಹ–ಆತ್ಮ–ಪರಮಾತ್ಮಗಳ ಸಂಬಂಧವಾಗಿ ಬೆಸೆದಿರುವುದನ್ನು ಗಮನಿಸಬಹುದು. ಮನುಷ್ಯನ ದೇಹ ಮತ್ತು ಲೋಕಗಳೆರಡೂ ಭಗವಂತನ ಸೃಷ್ಟಿ. ಗಿರಣಿಯಲ್ಲಿ ದಾರಗಳನ್ನು ನಿಯಂತ್ರಿಸಿ ನೇಯುವಂತೆ ಭಗವಂತ ಮನುಷ್ಯನ ದೇಹದ ಒಂಭತ್ತು ದಳಗಳನ್ನು ನಿಯಂತ್ರಿಸುತ್ತಾನೆ. ಹತ್ತಿಯನ್ನು ಹಿಂಜಿ ಹಂಜಿ ಮಾಡುವಂತೆ ಜಲ, ಅಗ್ನಿ, ವಾಯುವಿನಿಂದ ಬಂದ ಅಂಶಗಳನ್ನು ಕೂಡಿಸಿ ಮನುಷ್ಯನ ದೇಹವನ್ನು ನಿರ್ಮಿಸುತ್ತಾನೆ ಎಂಬ ಭಾವ ಇದರಲ್ಲಿದೆ.

ಒಟ್ಟಿನಲ್ಲಿ ಆಧ್ಯಾತ್ಮಿಕ ಅನುಭವವನ್ನು ಕಾವ್ಯ ರೂಪದಲ್ಲಿ ಕಟ್ಟಿಕೊಟ್ಟವರಲ್ಲಿ ಶರೀಫರು ಮೊದಲಿನವರಲ್ಲದಿದ್ದರೂ, ಉತ್ತರ ಕರ್ನಾಟಕದ ದೇಸಿ ಸೊಗಡಿನ ಭಾಷೆಯನ್ನು ಸಮರ್ಥವಾಗಿ ಬಳಸಿಕೊಂಡು ಜೀವನದ ಅನುಭವದ ದ್ರವ್ಯವನ್ನು ಪರಿಣಾಮಕಾರಿಯಾಗಿ ಧಾರೆಯೆರೆದವರಲ್ಲಿ ಅವರೇ ಮೊದಲಿಗರು.

**ಪರಾಮರ್ಶನ ಕೃತಿಗಳು–**

1. ಶಿಶುನಾಳ ಶರೀಫ್ ಸಾಹೇಬರ ಗೀತೆಗಳು, ಸಂ.–ಡಾ.ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಕ್ಷಮಾ ಪ್ರಕಾಶನ, ಬೆಂಗಳೂರು, 1988

2. ಶಿಶುನಾಳ ಶರೀಫ್ ಮತ್ತು ಸಂತ ಕಬೀರ್– ಒಂದು ತೌಲನಿಕ ಅಧ್ಯಯನ, ಡಾ. ಆರ್.ಪಿ. ಹೆಗಡೆ, ಸಮಾಜ ಶಿಕ್ಷಣ ವಿಶ್ವಸ್ತ ಸಮಿತಿ, ಸಿದ್ಧಾಪುರ(ಉ.ಕ), 1995

3. ಧಾರವಾಡ ಜಿಲ್ಲೆಯ ತತ್ವಪದ ಸಾಹಿತ್ಯ, ಡಾ. ಮಹೇಶ ಫ. ಗಾಜಪ್ಪನವರ, ಜ್ಯೋತಿ ಪ್ರಕಾಶನ, ಮೈಸೂರು, 2010